# ಶ್ರೀಮಾತೆಯವರ ವಚನಸುಧೆ

ಬಂಗಾಳಿ ಮೂಲ : **‘ಮ’** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೧

–೧–

ಶ್ರೀರಾಮಕೃಷ್ಣರು ದೇಹತ್ಯಾಗ ಮಾಡಿದಾಗ, ಶ್ರೀಮಾತೆಯವರು ‘ಅವರ ಮಾಯೆ ದೇಹವನ್ನು ಬಿಟ್ಟು ಹೋದಳು’ ಎಂದಿದ್ದರು. ಅವರ ಚಿನ್ಮಯ ದೇಹವು ಮಾತ್ರ ನಿತ್ಯವೂ ವಿರಾಜಮಾನವಾಗಿದೆ. ಒಂದು ಬಾರಿ ಹೃದಯ ಮುಖರ್ಜಿ ಹೇಳಿದರು – ‘‘ಅತ್ತೆ, ನೀನು ಮಾವನನ್ನು ತಂದೆ ಎಂದು ಭಾವಿಸಿದರೆ, ಅವರಿಗೆ ಐದು ಸೇರು ಸಂದೇಶ (ಸಿಹಿತಿಂಡಿ) ತಿನ್ನಿಸುತ್ತೇನೆ.’’ ಆಗ ಶ್ರೀಮಾತೆ ಹೇಳಿದರು, ‘‘ನೀನು ಸಂದೇಶ ತಿನ್ನಿಸಲಾಗದು. ನಾನು ಹೇಳುತ್ತೇನೆ, ನನ್ನ ತಂದೆ, ತಾಯಿ, ಗುರು, ಸ್ನೇಹಿತ, ಪತಿ ಎಲ್ಲವೂ ಅವರೇ ಆಗಿದ್ದಾರೆ.’’ ಅವರನ್ನು ಶ್ರೀಮಾತೆಯವರು ಎಲ್ಲ ಅವಸ್ಥೆ ಯಲ್ಲೂ ಪಡೆದಿದ್ದರಲ್ಲವೆ! ಶ್ರೀಮಾತೆಯವರ ವಿಶ್ವಾಸ ಎಂಥದು!

ಯಾವಾಗಲೋ ಒಮ್ಮೆ ಶ್ರೀರಾಮಕೃಷ್ಣರು ನಹಬತ್‌ನಲ್ಲಿ ನಿಂತು ಶ್ರೀಮಾತೆಯವರೊಂದಿಗೆ ಮಾತನಾಡುತ್ತಿದ್ದುದನ್ನು ಕಾಣಬಹುದಾಗಿತ್ತು. ಶ್ರೀಮಾತೆಯವರೊಡನೆ ಗೋಲಾಪ್–ಮಾ, ಯೋಗಿನ್–ಮಾ, ಗೌರೀಮಾ ಇವರೆಲ್ಲ ಇರುತ್ತಿದ್ದರು. ವೃಂದೆ ನಡುನಡುವೆ ಅಲ್ಲಿಗೆ ಹೋಗುತ್ತಿದ್ದಳು – ಬಹುಶಃ ಅಲ್ಪಾವಧಿ ಮಾತ್ರ ಕೆಲಸಕ್ಕೆ ಇದ್ದಿರಬೇಕು. ಸಾಬಿರ್ ಮಾ ಕೂಡ ಅಲ್ಲಿರುತ್ತಿದ್ದಳು. ಅಷ್ಟು ಸಣ್ಣ ಕೋಣೆ, ಅದರಲ್ಲಿ ಇಷ್ಟೊಂದು ಜನ! ಅದರ ನಡುವೆಯೇ ಅವರು ತಮ್ಮೆಲ್ಲ ಸಾಮಾನುಗಳನ್ನು ಇಟ್ಟುಕೊಂಡಿರುತ್ತಿದ್ದರು. *(ಶ್ರೀ ‘ಮ’ ದರ್ಶನ್, ಸ್ವಾಮಿ ನಿತ್ಯಾತ್ಮಾನಂದ, ೨ನೇ ಭಾಗ, ಪು. ೬೧)*

ಪತ್ನಿಯಾದವಳು ಪತಿವ್ರತೆಯಾಗಿದ್ದರೆ, ಅವಳ ಹೊಟ್ಟೆಬಟ್ಟೆಗೆ ವ್ಯವಸ್ಥೆ ಮಾಡಿಕೊಡಬೇಕು. ಶ್ರೀರಾಮಕೃಷ್ಣರು ಸ್ವತಃ ತಾವೇ ಶ್ರೀಮಾತೆಯವರಿಗಾಗಿ ಒಂದು ಕುಟೀರವನ್ನು ಹಾಗೂ ನಾನ್ನೂರು ರೂಪಾಯಿ ವ್ಯವಸ್ಥೆ ಮಾಡಿದ್ದರು. ಅವರ ಸಖೀಭಾವದ ಸಾಧನೆಯ ಸಮಯದಲ್ಲಿ ಮಥುರಬಾಬು ಯಾವ ಯಾವ ಅಲಂಕಾರ–ಆಭರಣಗಳನ್ನು ಒದಗಿಸಿದ್ದನೋ ಅವನ್ನೆಲ್ಲಾ ಮಾರಾಟ ಮಾಡಿ, ನಾನ್ನೂರು ರೂಪಾಯಿ ಬಂದಿತ್ತು.[೧] ಬಲರಾಮ ಬಾಬುಗಳ ಖಾತೆಯಲ್ಲಿ ಅದನ್ನು ಜಮೆ ಮಾಡಲಾಗಿತ್ತು. ಪ್ರತಿ ವರ್ಷಕ್ಕೆ ಮೂವತ್ತು ರೂಪಾಯಿ ಬಡ್ಡಿ ಬರುತ್ತಿತ್ತು. ಠಾಕೂರರು ನಡುನಡುವೆ ನಮ್ಮ ಬಳಿ ಕೇಳುತ್ತಿದ್ದರು: ‘‘ಒಬ್ಬಾಕೆ ಬ್ರಾಹ್ಮಣ ವಿಧವೆಗೆ ಒಂದು ತಿಂಗಳಿಗೆ ಎರಡು ರೂಪಾಯಿ ಇದ್ದರೆ ಸಾಕಾದೀತು, ಅಲ್ಲವೆ?’’ ಇತ್ತ, ತಮಗಾದರೋ ಹಗಲು–ರಾತ್ರಿ ತಿಳಿಯದು, ಮೈಯಲ್ಲಿ ಬಟ್ಟೆಬರೆ ಇದೆಯೋ ಇಲ್ಲವೋ ತಿಳಿಯದು, ಆದರೆ ಅತ್ತಕಡೆಗೆ ಮಾತ್ರ ಅಷ್ಟೊಂದು ಕಾಳಜಿ. ಇದನ್ನೆಲ್ಲಾ ಏಕೆ ಮಾಡಿದರೆಂದರೆ, ಉಳಿದವರೂ ಈ ರೀತಿ ನಡೆಯಲಿ ಎಂದು. *(ಅಲ್ಲೇ, ಮೊದಲ ಭಾಗ, ಪು.೬೨)*

ಒಂದು ಬಾರಿ ಶ್ರೀಮಾತೆಯವರು ಧ್ಯಾನ ಮಾಡುತ್ತಿದ್ದರು. ಯಾರೋ ಒಬ್ಬರು ಅಲ್ಲಿಗೆಹೋಗಿ, ಜೋರಾಗಿ ಅವರನ್ನು ಕರೆದರು. ಶ್ರೀಮಾತೆಯವರ ಧ್ಯಾನಕ್ಕೆ ಭಂಗವುಂಟಾಯಿತು. ಅವರು ದುಃಖದಿಂದ ಆರ್ತನಾದ ಮಾಡುತ್ತ ಮೇಲಕ್ಕೆದ್ದರು. ಅದನ್ನು ಕೇಳಿದ ಠಾಕೂರರು ತಮ್ಮ ಕೋಣೆಯಿಂದ ಹೊರಬಂದರು. ಆಗ ಶ್ರೀಮಾತೆ ನಹಬತ್‌ನಲ್ಲಿದ್ದರು, ಶಾಂತವಾಗಿದ್ದರು. ಅವರನ್ನು

---

೧ ವರ್ಷಕ್ಕೆ ೩೦ ರೂ. ಅಲ್ಲ, ಆರು ತಿಂಗಳಿಗೆ ೩೦ರೂಪಾಯಿ – ಅಂದರೆ ತಿಂಗಳಿಗೆ ೫ರೂ ಬಡ್ಡಿ ಬರುತ್ತಿತ್ತು. ಈ ಕುರಿತು ಸ್ವಾಮಿ ಗಂಭೀರಾನಂದರು ಬರೆಯುತ್ತಾರೆ: ‘‘ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಶ್ರೀಮಾತೆಯವರ ಜೀವನ ನಿರ್ವಹಣೆಯ ಕುರಿತಾಗಿಯೂ ಶ್ರೀರಾಮಕೃಷ್ಣರ ಮನಸ್ಸಿನಲ್ಲಿ ಆಲೋಚನೆ ಮೂಡಿತ್ತು. ಅದಕ್ಕಾಗಿ ಅವರು ತಾವು ತ್ಯಾಗಿಯಾಗಿದ್ದರೂ ಒಂದು ದಿನ ಶ್ರೀಮಾತೆಯವರನ್ನು ಕೇಳಿದ್ದರು, ‘ನಿನಗೆ ಎಷ್ಟು ಹಣವಿದ್ದರೆ ಸಾಕಾಗುವುದು?’ ಅದಕ್ಕೆ ಶ್ರೀಮಾತೆ, ‘ಸುಮಾರು ಐದು–ಆರು ರೂಪಾಯಿ ಇದ್ದರೆ ಸಾಕಾದೀತು’ ಎಂದಿದ್ದರು. ಬಳಿಕ ಶ್ರೀರಾಮಕೃಷ್ಣರು, ‘ರಾತ್ರಿ ಎಷ್ಟು ಚಪಾತಿ ತಿನ್ನುತ್ತೀಯೆ?’ ಎಂದು ಕೇಳಿದ್ದರು. ಇದನ್ನು ಕೇಳಿ ಶ್ರೀಮಾತೆಯವರು ಲಜ್ಜೆಗೊಂಡು, ನೆಲಕ್ಕಿಳಿದು ಹೋದರು. ತಿನ್ನುವ ವಿಷಯವಾಗಿ ಹೇಗೆ ಮಾತಾಡಲಿ? ಎಂದು. ಇತ್ತ ಠಾಕೂರರು ಕೂಡ ಪ್ರಶ್ನೆಗೆ ಉತ್ತರ ಕೇಳದೆ ಬಿಡುತ್ತಿಲ್ಲ. ಆಗ ಅವರೆಂದರು, ‘ಐದು–ಆರು ತಿನ್ನುತ್ತೇನೆ.’ ಆಗ ಠಾಕೂರರು ಖರ್ಚಿನ ಲೆಕ್ಕಾಚಾರ ಹಾಕಿ ಹೇಳಿದರು, ‘ಹಾಗಿದ್ದರೆ ನಿನ್ನ ಖರ್ಚುಗಳೆಲ್ಲ ೫–೬ ರೂಪಾಯಿಯಿದ್ದರೆ ಸಾಕಾದೀತು.’ ಅನಂತರ ಅವರು ಈ ಮೊತ್ತದ (೬೦೦ ರೂಪಾಯಿ)ಹಣವನ್ನು ಬಲರಾಮ ಬಾಬುವಿನ ಬಳಿ ಜಮೆ ಮಾಡಿಸಿಟ್ಟರು. ಬಲರಾಮಬಾಬು ಈ ಮೊತ್ತವನ್ನು ತನ್ನ ಖಾತೆಯಲ್ಲಿರಿಸಿ, ಅದರಿಂದ ಆರು ತಿಂಗಳು ಬಡ್ಡಿಯನ್ನು ೩೦ ರೂಪಾಯಿಯಂತೆ ಶ್ರೀಮಾತೆಯವರಿಗೆ ಕಳುಹಿಸಿಕೊಡುತ್ತಿದ್ದನು.’’ *(‘ಶ್ರೀಮಾ ಶಾರದಾದೇವಿ’, ಪು. ೧೦೭–೧೦೮).* ಇದೇ ಘಟನೆಯ ಬಗ್ಗೆ ಸರಳಾದೇವಿಯವರ ಸ್ಮೃತಿಕಥೆಯಲ್ಲಿ ಬೇರೆ ರೀತಿ ಕಂಡು ಬರುತ್ತದೆ: ‘‘ನಾನು ನಹಬತ್‌ನಲ್ಲಿ ವಾಸ ಮಾಡುತ್ತಿದ್ದಾಗ ಒಂದು ದಿನ ಠಾಕೂರರು ಬಂದು ಕೇಳಿದರು, ನಿನಗೆ ಎಷ್ಟು ಹಣವಿದ್ದರೆ ಸಾಕಾದೀತು? ಅಂತ. ನನಗೆ ಐದು ಅಥವಾ ಆರು ರೂಪಾಯಿ ಇದ್ದರೆ ಸಾಕಾದೀತು ಎಂದು ಕೇಳಿ, ನನಗೋಸ್ಕರ ೬೦೦ ರೂಪಾಯಿ ಜಮೆ ಮಾಡಿದ್ದರು. ಶ್ರೀಮಾತೆಯವರ ಈ ಹಣ ಬಲರಾಮಬಾಬುವಿನ ಖಾತೆಯಲ್ಲಿ ಇಡಲಾಗಿತ್ತು. ತಿಂಗಳಿಗೆ ಅದರಿಂದ ೬ರೂ. ಬಡ್ಡಿ ಬರುತ್ತಿತ್ತು. ಈ ಹಣವನ್ನು ಶ್ರೀಮಾತೆಯವರು ತಮ್ಮ ಹಣವೆಂದೇ ಹೇಳುತ್ತಿದ್ದರು.’’ *(ಮಾತೃದರ್ಶನ್, ಪು. ೬೮)*

ಕರೆದ ವ್ಯಕ್ತಿಗೆ ಹೇಳಿದರು: ‘‘ಧ್ಯಾನ ಮಾಡುವಾಗ ಯಾರನ್ನೂ ಕರೆಯಬಾರದು. ಏನೂ ಸದ್ದು ಮಾಡಬಾರದು.’’ *(ಅಲ್ಲೇ, ೧೦ನೇ ಭಾಗ, ಪು.೧೬)*

-೨-

ಶ್ರೀರಾಮಕೃಷ್ಣರು ಶ್ರೀಮಾತೆಯವರನ್ನು (ದಕ್ಷಿಣೇಶ್ವರಕ್ಕೆ) ಕರೆತಂದು, ಒಂದೇ ಹಾಸಿಗೆಯಲ್ಲಿ ಎಂಟು ತಿಂಗಳು ಕಾಲ ಇರಿಸಿದ್ದರು. ಯಾಕೆ? ಭಕ್ತರಿಗೆ ಶಿಕ್ಷಣ ನೀಡುವುದಕ್ಕಾಗಿ. ಒಂದೇ ಹಾಸಿಗೆಯಲ್ಲಿ ಅವರಿಬ್ಬರೂ ಮಲಗಿದ್ದರು; ಆದರೂ ದೇಹಸಂಪರ್ಕವಿರಲಿಲ್ಲ. ರಮಣಿಯೊಂದಿಗೆ ವಾಸ ಮಾಡದ ರಮಣನಾಗಿದ್ದರು. ಅವರು ಹಾಗೆ ಬಾಳಿದರೆ ಮಾತ್ರ ಭಕ್ತರಿಗೆ ಧೈರ್ಯವುಂಟಾಗುವುದು; ದಂಪತಿಗಳು ಅಣ್ಣ-ತಂಗಿಯರಂತೆ ಜೀವಿಸಲು ಉತ್ಸಾಹವುಂಟಾಗುವುದು. ಲೋಕಶಿಕ್ಷಣಕ್ಕಾಗಿಯೇ ಅವರ ವಿವಾಹ ನಡೆಯಿತು. ಮದುವೆಯಾದ ನಂತರ ಹೇಗೆ ಜೀವಿಸಬೇಕೆಂಬುದನ್ನೂ ಅವರು ತಾವೇ ತೋರಿಸಿಕೊಟ್ಟರು. *(ಅಲ್ಲೇ, ೨ನೇ ಭಾಗ, ಪು.೮೫)*

ಅವರು (ಶ್ರೀರಾಮಕೃಷ್ಣರು) ಎಷ್ಟೊಂದು ಕಷ್ಟದಿಂದ ಜೀವನ ನಡೆಸಿದರು! ಮಥುರಬಾಬು ತೀರಿಕೊಂಡ. ಅವನ ನಂತರ ಅವರನ್ನು ನೋಡಿಕೊಳ್ಳುವವರು ಯಾರೂ ಇರಲಿಲ್ಲ. ಹನ್ನೆರಡು-ಒಂದು ಗಂಟೆಯಾದರೆ ಊಟಕ್ಕೆ ಒಣಗಿದ ಅನ್ನವನ್ನು ತಿನ್ನಬೇಕು. ಚಾಪೆ, ಹಾಸಿಗೆಗಳು ಕೊಳೆಯಾಗಿರುತ್ತಿದ್ದವು; ಚಿಂದಿಯಾಗಿರುತ್ತಿದ್ದವು. ಅಷ್ಟೊಂದು ಕಷ್ಟ; ಆದರೂ ಯಾರ ಗಮನವೂ ಅತ್ತ ಹರಿಯುತ್ತಿರಲಿಲ್ಲ. ಇದರಿಂದ ಅವರ ದೇಹಾರೋಗ್ಯ ಇನ್ನಷ್ಟು ಕೆಟ್ಟುಹೋಯಿತು. ಇದನ್ನು ಕುರಿತು ಅವರು ಶ್ರೀಮಾತೆಯವರಿಗೆ ಹೀಗೆ ಬರೆದಿದ್ದರು: ‘‘ನನ್ನನ್ನು ನೋಡಿಕೊಳ್ಳಲು ಇಲ್ಲಿ ಯಾರೂ ಇಲ್ಲ. ನೀನು ಬಂದರೆ ಚೆನ್ನಾಗಿರುತ್ತದೆ.’’ ಅಂತೆಯೇ ಶ್ರೀಮಾತೆ ಹಳ್ಳಿಯಿಂದ ಬಂದುಬಿಟ್ಟರು. ಬಳಿಕ ಅವರು ಬೆಳಿಗ್ಗೆಯೇ ಅಡುಗೆ ಮಾಡಿ ಒಳ್ಳೆಯ ಊಟವನ್ನು ನೀಡುತ್ತಿದ್ದರು. *(ಅಲ್ಲೇ, ೧೬ನೇ ಭಾಗ, ಪು.೬೩)*

ಠಾಕೂರರು ಹೇಳುತ್ತಿದ್ದರು: ‘‘ಯಾವ ಶಕ್ತಿಯನ್ನು (ಶ್ರೀಮಾತೆಯವರನ್ನು) ನಾನು ಮುಂದೆ ಇಟ್ಟುಕೊಂಡಿದ್ದೇನೋ, ಅದರ ಮೂಲಕವೇ ಸಂಸಾರದ ಬಂಧನದಿಂದ ಪಾರು ಮಾಡುತ್ತೇನೆ.’’ *(ಅಲ್ಲೇ, ೧ನೇ ಭಾಗ, ಪು.೧೦೫)*

ಶ್ರೀಮಾತೆಯವರು ವೃದ್ಧೆಯಾಗಿದ್ದರು; ಹಾಗಿದ್ದರೂ ಅವರು ಅಂದು ತಮ್ಮ ತಲೆಯ ಮೇಲಿದ್ದ ಸೆರಗನ್ನು ಮೇಲಕ್ಕೆಳೆದುಕೊಂಡಿರುತ್ತಿದ್ದರು. ದಕ್ಷಿಣೇಶ್ವರದಲ್ಲಿ ಇದ್ದಾಗ ನಾವು ಐದು ವರ್ಷಗಳಲ್ಲಿ ಅವರನ್ನು ನೋಡಲು ಸಾಧ್ಯವಾಗಲಿಲ್ಲ. ಠಾಕೂರರು, ‘ರಾಮಲಾಲನ ಚಿಕ್ಕಮ್ಮ’ ಎಂದು ಹೇಳುತ್ತಿದ್ದುದನ್ನು ಮಾತ್ರವೇ ಕೇಳಿಸಿಕೊಳ್ಳುತ್ತಿದ್ದೆವು. ಒಂದು ದಿನ ನಾನು ಅವರನ್ನು ಕೇಳಿದೆ, ‘‘ ರಾಮಲಾಲನ ಚಿಕ್ಕಮ್ಮ ಎಂದರೆ ಯಾರು?’’ ಅದಕ್ಕೆ ಠಾಕೂರರು ಹೇಳಿದರು, ‘‘ಅವಳು ನಹಬತ್‌ನಲ್ಲಿ ಇರುತ್ತಾಳೆ.’’ ಯಾರು ಜೀವನದ ಧ್ರುವತಾರೆಯಾಗಿದ್ದರೋ, ಮೂವತ್ತೈದು ವರ್ಷಗಳ ಕಾಲ ಯಾರ ಒಡನಾಟ ದೊರಕಿತೋ, ಯಾರು ಜೀವನದ ಮಾರ್ಗದರ್ಶಕರಾಗಿದ್ದರೋ, ಅವರನ್ನೇ ನೋಡಲು ಸಾಧ್ಯವಾಗಲಿಲ್ಲ! ಠಾಕೂರರು ತೀರಿಕೊಂಡ ನಂತರವಷ್ಟೇ ನನಗೆ ಅವರ ಮುಖವನ್ನು ದರ್ಶನ ಮಾಡಲು ಸಾಧ್ಯವಾಯಿತು; ಅದೂ ಬಹಳ ದಿನಗಳ ನಂತರ. ಠಾಕೂರರನ್ನು ಐದು ವರ್ಷಗಳವರೆಗೆ ಮಾತ್ರ ನೋಡುವಂತಾಯಿತು. ಆದರೆ ಶ್ರೀಮಾತೆಯವರನ್ನು ಮೂವತ್ತೈದು ವರ್ಷಗಳವರೆಗೆ ನೋಡಿದೆ. *(ಅಲ್ಲೇ, ಪು.೨೮೯-೨೯೦)*

ಠಾಕೂರರು ಶ್ರೀಮಾತೆಯವರಿಗೆ ಹೇಳಿದ್ದರು: ‘‘ಇದೇ ನಿನ್ನ ಮಣ್ಣಿನ ಮನೆ. ಇಲ್ಲಿ ನೀನು ಅನ್ನ, ತರಕಾರಿ ಅಡುಗೆ ಮಾಡಿ ಊಟ ಮಾಡು. ಇಡೀ ದಿನ ಹರಿನಾಮ ಜಪಿಸು.’’ ಆದರೆ ಮನೆ ತಮ್ಮದಾಗಬೇಕಲ್ಲವೆ? ಅನ್ನ, ತರಕಾರಿಗೆ ಬದಲಾಗಿ ಅನ್ನ, ದಾಲ್ ಇರುವಲ್ಲಿ ಇರಬೇಕಾಯಿತು. ಅಷ್ಟಾದರೆ ಬೇಕಾದಷ್ಟಾಯಿತು. ಬರೀ ಅನ್ನವನ್ನಾದರೂ ಎಷ್ಟು ಜನ ಪಡೆಯುತ್ತಾರೆ? ಆದ್ದರಿಂದಲೇ ಶ್ರೀಮಾತೆಯವರು ಕಾಮಾರಪುಕುರದ ಆ ಕೋಣೆಯನ್ನು ಹಾಗೆಯೇ ಇಟ್ಟುಕೊಂಡರು. *(ಅಲ್ಲೇ, ೪ನೇ ಭಾಗ, ಪು.೩೦೯-೧೦)*

ಒಂದು ಸಲ ಶ್ರೀಮಾತೆಯವರು ಒಬ್ಬಾಕೆ ಭಕ್ತೆಗೆ ಹೇಳಿದರು, ‘‘ನಿಜವಮ್ಮಾ, ಎಷ್ಟೋಮಂದಿ ಸಾಧುಗಳನ್ನು ನೋಡಿದ್ದೇನೆ. ಆದರೆ ಯಾರನ್ನೂ ಶ್ರೀರಾಮಕೃಷ್ಣರೊಂದಿಗೆ ಹೋಲಿಸಲಾಗದು.’’ ಅದಕ್ಕೆ ಭಕ್ತೆ ಹೇಳಿದಳು, ‘‘ಅದೇನು ಹೇಳಲಿ, ಅಮ್ಮಾ! ಬೇರೆ ಸಾಧುಗಳೆಲ್ಲಾ ಉದ್ಧಾರ ಹೊಂದುವುದಕ್ಕಾಗಿ ಬರುತ್ತಾರೆ. ಆದರೆ ಶ್ರೀರಾಮಕೃಷ್ಣರು ಉದ್ಧಾರ ಮಾಡುವುದಕ್ಕಾಗಿ ಬಂದರು.’’ ಶ್ರೀಮಾತೆಯವರು ನಗುತ್ತಾ, ‘‘ಹೌದಲ್ಲ ಮತ್ತೆ’’ ಎಂದರು. ಅವರು ಭಕ್ತೆಯನ್ನು ಪರೀಕ್ಷೆ ಮಾಡುವುದಕ್ಕಾಗಿ ಹಾಗೆ ಹೇಳಿದ್ದರು. *(ಅಲ್ಲೇ, ೧ನೇ ಭಾಗ, ಪು.೧೩೧)*

ಸಂಪೂರ್ಣವಾಗಿ ಪರಿಶುದ್ಧನಾದ ಸಾಧುವನ್ನು ಹುಡುಕಿಕೊಂಡು ಯಾರು ಅಲೆದಾಡುವರೋ ಅವರು ಮೋಸಹೊಂದುತ್ತಾರೆ. ತಾವು ಏನಾಗಿದ್ದೇವೋ ಅದರ ಕಡೆಗೆ ಅವರಿಗೆ ಗಮನವಿಲ್ಲ; ತಮ್ಮ ಕಡೆಗೆ ಒಂದು ಸಲವೂ ನೋಡಲಾರರು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಮನುಷ್ಯರಾದ ಮೇಲೆ ದೋಷಗಳಿದ್ದೇ ಇರುತ್ತವೆ ಅಂತ. ದೋಷವಿಲ್ಲದ ವ್ಯಕ್ತಿ ಎಂದರೆ ಈಶ್ವರನೊಬ್ಬನೇ- ಅವನೇ ಅವತಾರ, ದೇವತೆ. ಶ್ರೀಮಾತೆಯವರು ಹೇಳುತ್ತಿದ್ದರು, ‘‘ಚಂದ್ರನಲ್ಲೂ ಕಳಂಕವಿದೆ, ಆದರೆ ಶ್ರೀರಾಮಕೃಷ್ಣರೆಂಬ ಚಂದ್ರನಲ್ಲಿ ಮಾತ್ರ ಕಳಂಕವಿಲ್ಲ.’’ ಎಂದು. *(ಅಲ್ಲೇ, ಭಾಗ ೩, ಪು.೫೫)*

***(ಮುಂದಿನ ಸಂಚಿಕೆಗೆ)***